## ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 971 (1067) |
| ಸದಸ್ಯರ ಹೆಸರು | : | ಶ್ರೀ. ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭಾ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 16.12.2025 |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ, ತೆಂಗು ಬೆಳೆಯುವ ಭೂಮಿಯ ಒಟ್ಟು ವಿಸ್ತೀರ್ಣವೆಷ್ಟು; ಬೆಳೆ ವಿಸ್ತೀರ್ಣ ಹಾಗೂ ವಾರ್ಷಿಕ ಉತ್ಪನ್ನದ ಸಂಪೂರ್ಣ ಮಾಹಿತಿಯನ್ನು ಜಿಲ್ಲಾವಾರು, ತಾಲ್ಲೂಕುವಾರು ಪ್ರತ್ಯೇಕವಾಗಿ ನೀಡುವುದು;</td><td>ರಾಜ್ಯದಲ್ಲಿ ತೆಂಗು ಬೆಳೆಯುವ ಭೂಮಿಯ ಒಟ್ಟು ವಿಸ್ತೀರ್ಣ 6.00 ಲಕ್ಷ ಹೆಕ್ಟೇರ್ ಹಾಗೂ ವಾರ್ಷಿಕ ಉತ್ಪನ್ನ 49090 ಲಕ್ಷ ತೆಂಗಿನ ಕಾಯಿಗಳಾಗಿರುತ್ತದೆ.<br>ಜಿಲ್ಲಾವಾರು, ತಾಲ್ಲೂಕುವಾರು ವಿವರ ಅನುಬಂಧದಲ್ಲಿ ಒದಗಿಸಿದೆ.</td></tr>
<tr><td>ಆ)</td><td>ಕೇಂದ್ರ ತೆಂಗು ಅಭಿವೃದ್ಧಿ ಮಂಡಳಿ ವತಿಯಿಂದ ರಾಜ್ಯದ ತೆಂಗು ಬೆಳೆಗಾರರಿಗೆ ದೊರೆಯುತ್ತಿರುವ ನೆರವು, ಸೌಲಭ್ಯಗಳು ಹಾಗೂ ಸಹಾಯಧನಗಳು ಯಾವುವು;</td><td>ಕೇಂದ್ರ ತೆಂಗು ಅಭಿವೃದ್ಧಿ ವತಿಯಿಂದ ರಾಜ್ಯದ ತೆಂಗು ಬೆಳೆಗಾರರಿಗೆ ದೊರೆಯುತ್ತಿರುವ ನೆರವು, ಸೌಲಭ್ಯಗಳು ಹಾಗೂ ಸಹಾಯಧನಗಳು ಕೆಳಗಿನಂತಿವೆ:<br>1. ತೆಂಗಿನ ತೋಟಗಳ ಪುನ:ಶ್ಚೇತನ, ಮರುನಾಟಿ ಮತ್ತು ನಿರ್ವಹಣೆ ಕಾರ್ಯಕ್ರಮ: ಈ ಕಾರ್ಯಕ್ರಮದಡಿ ಪ್ರತಿ ಫಲಾನುಭವಿಗೆ ಒಂದು ಹೆಕ್ಟೇರ್ ವರೆಗೆ ರೂ. 54,000/-ಗಳನ್ನು ಎರಡು ವರ್ಷದ ಅವಧಿಯಲ್ಲಿ ನೀಡಲಾಗುತ್ತಿದೆ.
<table>
<tr><th colspan="2">ಮೊದಲನೇ ವರ್ಷಕ್ಕೆ (ರೂ. 54000/ಪ್ರತಿ ಹೆಕ್ಟೇರ್)</th></tr>
<tr><td>ಅನುತ್ಪಾದಕ/ವಯಸ್ಸಾದ/ ರೋಗ/ಕೀಟದಿಂದ ಬಾಧಿತ ಮರ ಕತ್ತರಿಸಲು / ತೆಗೆಯಲು</td><td>ರೂ.32,000 ಪ್ರತಿ ಹೆಕ್ಟೇರ್ ಗೆ (ರೂ.1000 ಪ್ರತಿ ಮರಕ್ಕೆ)</td></tr>
<tr><td>ಮರ ತೆಗೆದ ಜಾಗದಲ್ಲಿ ಮರುನಾಟಿ ಮಾಡಲು</td><td>ರೂ.4,500 ಪ್ರತಿ ಹೆಕ್ಟೇರಿಗೆ (ರೂ. 45 ಪ್ರತಿ ತೆಂಗಿನ ಸಸಿಗೆ)</td></tr>
<tr><td>ಸಮಗ್ರ ಪೋಷಕಾಂಶ ಹಾಗೂ ಸಮಗ್ರ ಕೀಟ / ರೋಗ ನಿರ್ವಹಣೆಗೆ</td><td>ರೂ.8,750 ಪ್ರತಿ ಹೆಕ್ಟೇರಿಗೆ</td></tr>
</table></td></tr>
</table>

| | | |
|---|---|---|
| | | **ಎರಡನೇ ವರ್ಷಕ್ಕೆ (ರೂ. 8750/ಪ್ರತಿ ಹೆಕ್ಟೇರ್)** |

| | |
|---|---|
| ಸಮಗ್ರ ಪೋಷಕಾಂಶ ಹಾಗೂ ಸಮಗ್ರ ಕೀಟ / ರೋಗ ನಿರ್ವಹಣೆಗೆ | ರೂ.8,750 ಪ್ರತಿ ಹೆಕ್ಟೇರಿಗೆ |

| ವರ್ಷ (ಮೊದಲನೇ ವರ್ಷದ ಕಾರ್ಯಕ್ರಮ) | ಪ್ರದೇಶ (ಹೆಕ್ಟೇರ್) | ಅನುದಾನ (ರೂ. ಲಕ್ಷಗಳಲ್ಲಿ) | ಫಲಾನುಭವಿಗಳ ಸಂಖ್ಯೆ |
|---|---|---|---|
| 2023-24 | 2423.50 | 951.19 | 4571 |
| 2024-25 | - | - | - |
| 2025-26 | 1000 | 452.50 | ಅನುಷ್ಠಾನದಲ್ಲಿದೆ |
| ವರ್ಷ (ಎರಡನೇ ವರ್ಷದ ಕಾರ್ಯಕ್ರಮ) | ಪ್ರದೇಶ (ಹೆಕ್ಟೇರ್) | ಅನುದಾನ (ರೂ. ಲಕ್ಷಗಳಲ್ಲಿ) | ಫಲಾನುಭವಿಗಳ ಸಂಖ್ಯೆ |
| 2023-24 | 1845.49 | 161.48 | 5028 |
| 2024-25 | - | - | - |
| 2025-26 | 2126.17 | 186.04 | ಅನುಷ್ಠಾನದಲ್ಲಿದೆ |

2. ರೈತರ ತಾಕುಗಳಲ್ಲಿ ಪ್ರಾತ್ಯಕ್ಷತೆ ಹಾಗೂ ನಿರ್ವಹಣೆ: ಈ ಕಾರ್ಯಕ್ರಮದಡಿ ಸಮಗ್ರ ಪೋಷಕಾಂಶ ಹಾಗೂ ಸಮಗ್ರ ಕೀಟ / ರೋಗ ನಿರ್ವಹಣೆಗೆ ಒಂದು ಹೆಕ್ಟೇರ್ ಗೆ ರೂ. 35,000/- ಗಳನ್ನು 2 ವರ್ಷಗಳ ಅವಧಿಗೆ, ಮೊದಲನೇ ವರ್ಷ ರೂ.17500/- ಗಳು ಮತ್ತು ಎರಡನೇ ವರ್ಷದಲ್ಲಿ ರೂ.17500/- ಗಳಂತೆ ಸಹಾಯಧನ ನೀಡಲಾಗುತ್ತಿದೆ. ರೋಗ ಮತ್ತು ಕೀಟಬಾಧಿತ ತಾಕುಗಳನ್ನು ಗುಚ್ಛಗಳಲ್ಲಿ (Clusters) ಆಯ್ಕೆ ಮಾಡಿ ಸಹಾಯಧನ ನೀಡಲಾಗಿರುತ್ತದೆ.

| ವರ್ಷ (ಮೊದಲನೇ ವರ್ಷದ ಕಾರ್ಯಕ್ರಮ) | ಪ್ರದೇಶ (ಹೆಕ್ಟೇರ್) | ಅನುದಾನ (ರೂ. ಲಕ್ಷಗಳಲ್ಲಿ) | ಫಲಾನುಭವಿಗಳ ಸಂಖ್ಯೆ |
|---|---|---|---|

| | | | |
|---|---|---|---|
| 2023-24 | 28420 | 4973.45 | 41185 |
| 2024-25 | - | - | - |
| 2025-26 | - | - | - |

| ವರ್ಷ (ಎರಡನೇ ವರ್ಷದ ಕಾರ್ಯಕ್ರಮ) | ಪ್ರದೇಶ (ಹೆಕ್ಟೇರ್) | ಅನುದಾನ (ರೂ. ಲಕ್ಷಗಳಲ್ಲಿ) | ಫಲಾನುಭವಿಗಳ ಸಂಖ್ಯೆ |
|---|---|---|---|
| 2023-24 | - | - | - |
| 2024-25 | 6046.89 | 1058.19 | 9294 |
| 2025-26 | 28420 | 4973.45 | ಅನುಷ್ಠಾನದಲ್ಲಿದೆ |

3. ತೆಂಗು ಮರ ವಿಮೆ (CPIS) ಯೋಜನೆಯಡಿ ಶೇ.50:25:25 (ತೆಂಗು ಅಭಿವೃದ್ಧಿ ಮಂಡಳಿ: ರಾಜ್ಯವಂತಿಕೆ: ರೈತರ ವಂತಿಕೆ) 4 ರಿಂದ 15 ವರ್ಷದ ಮರಗಳಿಗೆ ರೂ. 1900 ಹಾಗೂ 16 ರಿಂದ 60 ವರ್ಷದ ಮರಗಳಿಗೆ ರೂ. 3700 ಗಳ ವಿಮಾ ಮೊತ್ತವನ್ನು ನೀಡಲಾಗುವುದು. ಪ್ರಸಕ್ತ ಸಾಲಿಗೆ ರೂ. 10 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದೆ.
4. ತೆಂಗು ಅಭಿವೃದ್ಧಿ ಮಂಡಳಿ ವತಿಯಿಂದ ನೇರವಾಗಿ ಅನುಷ್ಠಾನಗೊಳಿಸಲಾಗುತ್ತಿರುವ ಕೇರಾ ಸುರಕ್ಷಾ ಯೋಜನೆಯಡಿ ಶೇ.85:15 (ತೆಂಗು ಅಭಿವೃದ್ಧಿ ಮಂಡಳಿ: ರೈತರ ವಂತಿಕೆ): ನೀರಾ ತಾಂತ್ರಿಕರು/ ಮರ ಹತ್ತುವವರು/ತೆಂಗು ತಾಕುಗಳಲ್ಲಿ ಅಥವಾ ತೆಂಗು ಬೆಳೆಗೆ ಸಂಬಂದಪಟ್ಟ ಸಣ್ಣಮಟ್ಟದ ಕಾರ್ಖಾನೆಗಳಲ್ಲಿನ ಕೆಲಸಗಾರರಿಗೆ ಇದರ ಸೌಲಭ್ಯ ಪಡೆಯಲು ಅವಕಾಶವಿರುತ್ತದೆ.
5. ತೆಂಗು ಬೆಳೆ ವಿಸ್ತೀರ್ಣ ಯೋಜನೆಯಡಿ ತೆಂಗು ಬೆಳೆಗಾರರನ್ನು ಪ್ರೋತ್ಸಾಹಿಸಲು ಪ್ರತಿ ಹೆಕ್ಟೇರ್ ಗೆ ರೂ. 56000 ರಂತೆ ತೆಂಗು ಅಭಿವೃದ್ಧಿ ಮಂಡಳಿ ವತಿಯಿಂದ ನೇರವಾಗಿ ಸಹಾಯಧನ ನೀಡಲಾಗುತ್ತಿದೆ.
6. ಉತ್ತಮ ಗುಣಮಟ್ಟದ ತೆಂಗು ಸಸಿಗಳ ಉತ್ಪಾದನೆಗಾಗಿ ಬೀಜ ಉತ್ಪಾದನೆ ಜೊತೆಗೆ ಪ್ರಾತ್ಯಕ್ಷಿತೆ (Demonstration cum-Seed Production) ಕ್ಷೇತ್ರಗಳಲ್ಲಿ ಕೈಗೊಳ್ಳಲು ರೂ. 5.00 ಲಕ್ಷಗಳನ್ನು ನಿಗದಿಪಡಿಸಲಾಗಿದೆ.
7. ತೆಂಗು ನ್ಯೂಕ್ಲಿಯಸ್ ಬೀಜ ಉತ್ಪಾದನಾ ತಾಕುಗಳ ನಿರ್ಮಾಣಕ್ಕೆ ರೂ. 19.65 ಲಕ್ಷ ಹಾಗೂ ಖಾಸಗಿ ಮತ್ತು ಸಾರ್ವಜನಿಕ ಸಣ್ಣ ನರ್ಸರಿಗಳ ನಿರ್ಮಾಣಕ್ಕೆ 3.38 ಲಕ್ಷ ಸಂಖ್ಯೆಯ ತೆಂಗಿನ ಸಸಿಗಳ ಉತ್ಪಾದನೆ ಗುರಿಗೆ ರೂ. 12.01

<table>
<tr>
<td></td>
<td></td>
<td>ಲಕ್ಷಗಳ ಅನುದಾನ ನಿಗಧಿಪಡಿಸಲಾಗಿದೆ.<br><br>8. ಅಸ್ತಿತ್ವದಲ್ಲಿರುವ ತೆಂಗಿನ ತೋಟಗಳಲ್ಲಿ ಶಾಶ್ವತ ಉತ್ಪಾದಕತೆಯ ಸುಧಾರಣೆಗೆ ಸಮಗ್ರ ಕಾರ್ಯಕ್ರಮದಡಿ 5600 ಹೆಕ್ಟೇರ್ ಪ್ರದೇಶಗಳಿಗೆ ರೂ. 760 ಲಕ್ಷಗಳನ್ನು ನಿಗದಿಪಡಿಸಲಾಗಿದೆ.<br>9. ಮಾರುಕಟ್ಟೆ ಮಾಹಿತಿ ಮತ್ತು ಸಂಶೋಧನೆ, ಅಂಕಿಅಂಶಗಳು, ಉತ್ಪನ್ನ ಮತ್ತು ಬ್ರ್ಯಾಂಡ್ ಪ್ರಚಾರ ಹಾಗೂ ರಫ್ತು ಪ್ರಚಾರ ಸೇವೆಗಳು ಮತ್ತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಲು ರೂ. 25.26 ಲಕ್ಷಗಳನ್ನು ನಿಗದಿಪಡಿಸಲಾಗಿದೆ.</td>
</tr>
<tr>
<td>ಇ)</td>
<td>2024-25 ನೇ ಸಾಲಿನಲ್ಲಿ 'ಕೇಂದ್ರ ತೆಂಗು ಅಭಿವೃದ್ಧಿ ಮಂಡಳಿ' ವತಿಯಿಂದ ರಾಜ್ಯದ ಎಷ್ಟು ಜನ ತೆಂಗು ಬೆಳೆಗಾರರು ಯಾವೆಲ್ಲಾ ನೆರವು, ಸೌಲಭ್ಯಗಳು ಹಾಗೂ ಸಹಾಯಧನಗಳನ್ನು ಪಡೆದಿದ್ದಾರೆ; ಪ್ರತಿ ಫಲಾನುಭವಿ ಪಡೆದಿರುವ ನೆರವು, ಸೌಲಭ್ಯಗಳು ಹಾಗೂ ಸಹಾಯಧನಗಳ ಸಂಪೂರ್ಣ ವಿವರಗಳನ್ನು ಜಿಲ್ಲಾವಾರು, ತಾಲ್ಲೂಕುವಾರು ಪ್ರತ್ಯೇಕವಾಗಿ ಒದಗಿಸುವುದು;</td>
<td>2024-25ನೇ ಸಾಲಿನಲ್ಲಿ 'ಕೇಂದ್ರ ತೆಂಗು ಅಭಿವೃದ್ಧಿ ಮಂಡಳಿ' ವತಿಯಿಂದ ರಾಜ್ಯದ ತೆಂಗು ಬೆಳೆಗಾರರಿಗೆ ಒದಗಿಸಲಾದ ನೆರವು, ಸೌಲಭ್ಯಗಳು ಹಾಗೂ ಸಹಾಯಧನಗಳ ವಿವರ ಕೆಳಗಿನಂತಿದೆ.<br>1. ತೆಂಗು ಬೆಳೆ ವಿಸ್ತೀರ್ಣ ಯೋಜನೆಯಡಿ ತೆಂಗು ಬೆಳೆಗಾರರನ್ನು ಪ್ರಸ್ತಾಹಿಸಲು ಪ್ರತಿ ಹೆಕ್ಟೇರ್ ಗೆ ರೂ. 56000 ರಂತೆ ತೆಂಗು ಅಭಿವೃದ್ಧಿ ಮಂಡಳಿ ವತಿಯಿಂದ ನೇರವಾಗಿ ಸಹಾಯಧನ ನೀಡಲಾಗುತ್ತಿದೆ. ಈ ಕಾರ್ಯಕ್ರಮದಡಿ 380.45 ಹೆಕ್ಟೇರ್ ಪ್ರದೇಶಕ್ಕೆ ರೂ. 12.68 ಲಕ್ಷ ವಿನಿಯೋಗಿಸಿ 538 ಫಲಾನುಭವಿಗಳಿಗೆ ಸಹಾಯಧನ ಒದಗಿಸಲಾಗಿದೆ.<br>2. ರೈತರ ತಾಕುಗಳಲ್ಲಿ ಪ್ರಾತ್ಯಕ್ಷತೆ ಹಾಗೂ ನಿರ್ವಹಣೆ ಕಾರ್ಯಕ್ರಮದಡಿ ಸಮಗ್ರ ಪೋಷಕಾಂಶ ಹಾಗೂ ಸಮಗ್ರ ಕೀಟ / ರೋಗ ನಿರ್ವಹಣೆಗೆ ಒಂದು ಹೆಕ್ಟೇರ್ ಗೆ ರೂ. 35,000/- ಗಳನ್ನು 2 ವರ್ಷಗಳ ಅವಧಿಯಲ್ಲಿ ರೋಗ ಮತ್ತು ಕೀಟಬಾಧಿತ ತಾಕುಗಳನ್ನು ಗುಚ್ಚಗಳಲ್ಲಿ (Clusters) ಆಯ್ಕೆ ಮಾಡಿ ಸಹಾಯಧನ ನೀಡಲಾಗುತ್ತಿದೆ. ಎರಡನೇ ವರ್ಷದ ನಿರ್ವಹಣೆ ಕಾರ್ಯಕ್ರಮಕ್ಕೆ ರೂ. 1058.19 ಲಕ್ಷಗಳನ್ನು ವಿನಿಯೋಗಿಸಿ 6046.89 ಹೆಕ್ಟೇರ್ ಗಳಲ್ಲಿ 9294 ಫಲಾನುಭವಿಗಳಿಗೆ ಸಹಾಯಧನ ಒದಗಿಸಲಾಗಿದೆ.
<table>
<tr><th>ವರ್ಷ (ಮೊದಲ ನೇ ವರ್ಷದ ಕಾರ್ಯ ಕ್ರಮ)</th><th>ಪ್ರದೇಶ (ಹೆಕ್ಟೇರ್)</th><th>ಅನುದಾನ (ರೂ. ಲಕ್ಷಗಳಲ್ಲಿ)</th><th>ಫಲಾನುಭವಿಗಳ ಸಂಖ್ಯೆ</th></tr>
<tr><td>2023-24</td><td>28420</td><td>4973.45</td><td>41185</td></tr>
<tr><td>2023-24</td><td>6046.89</td><td>1058.19</td><td>9294</td></tr>
<tr><td>2024-25</td><td>-</td><td>-</td><td>-</td></tr>
</table></td>
</tr>
</table>

| 2023-24ನೇ ಸಾಲಿನಲ್ಲಿ ಮೇಲಿನಂತೆ 2 ಕಂತುಗಳಲ್ಲಿ ಬಿಡುಗಡೆಯಾಗಿರುತ್ತದೆ. | | | |
|---|---|---|---|
| ವರ್ಷ (ಎರಡನೇ ವರ್ಷದ ಕಾರ್ಯಕ್ರಮ) | ಪ್ರದೇಶ (ಹೆಕ್ಟೇರ್) | ಅನುದಾನ (ರೂ. ಲಕ್ಷಗಳಲ್ಲಿ) | ಫಲಾನುಭವಿಗಳ ಸಂಖ್ಯೆ |
| 2024-25 | 6046.89 | 1058.19 | 9294 |
| 2025-26 | 28420 | 4973.45 | ಅನುಷ್ಠಾನದಲ್ಲಿದೆ |

ಜಿಲ್ಲಾ ಹಾಗೂ ತಾಲ್ಲೂಕುವಾರು ವಿವರ ಕೆಳಗಿನಂತಿದೆ.

| **ಕ್ರ. ಸಂ.** | **ಜಿಲ್ಲೆ** | **ತಾಲ್ಲೂಕ** | **ಸಹಾಯಧನ (ರೂ.ಲಕ್ಷಗಳಲ್ಲಿ)** | **ಪ್ರದೇಶ (ಹೆಕ್ಟೇರ್ ಗಳಲ್ಲಿ)** | **ಫಲಾನುಭವಿಗಳ ಸಂಖ್ಯೆ** |
|---|---|---|---|---|---|
| 1. | ತುಮಕೂರು | ತುರುವೇಕೆರೆ | 189.03 | 1080.17 | 1222 |
| 2. | ಹಾಸನ | ಚನ್ನರಾಯಪಟ್ಟಣ | 97.48 | 557 | 1249 |
| 3. | ಚಿಕ್ಕಮಗಳೂರು | ಅಜ್ಜಂಪುರ | 216.95 | 1239.72 | 2107 |
| 4. | ದಾವಣಗೆರೆ | ದಾವಣಗೆರೆ | 21.18 | 121 | 152 |
| 5. | ಮಂಡ್ಯ | ಕೆ.ಆರ್. ಪೇಟೆ | 38.85 | 222 | 316 |
| | | ಮಳವಳ್ಳಿ | 56.86 | 325 | 491 |
| | | ಮಂಡ್ಯ | 17.5 | 100 | 127 |
| | | ನಾಗಮಂಗಲ | 65.28 | 373 | 667 |
| 6. | ಮೈಸೂರು | ಹುಣಸೂರು | 42.86 | 245 | 361 |
| | | ಮೈಸೂರು | 17.85 | 102 | 163 |
| | | ಕೆ.ಆರ್.ನಗರ | 17.5 | 100 | 152 |
| 7. | ಚಿತ್ರದುರ್ಗ | ಹಿರಿಯೂರು | 28 | 160 | 187 |
| | | ಹೊಳಲ್ಕೆರೆ | 88.72 | 507 | 591 |
| 8. | ಬೆಂಗಳೂರು ದಕ್ಷಿಣ | ಚನ್ನಪಟ್ಟಣ | 109.72 | 627 | 1139 |
| | | ಕನಕಪುರ | 50.4 | 288 | 370 |
| | ಒಟ್ಟು | | **1058.19** | **6046.8** | **9294** |

| | | |
|---|---|---|
| | | 9<br>**3.** ರೈತರ ತಾಕುಗಳಲ್ಲಿ ಪ್ರಾತ್ಯಕ್ಷತೆ ಹಾಗೂ ನಿರ್ವಹಣೆ ಕಾರ್ಯಕ್ರಮದಡಿ ತೆಂಗು ಅಭಿವೃದ್ದಿ ಮಂಡಳಿ ವತಿಯಿಂದ ನೇರವಾಗಿ 1679.17 ಹೆಕ್ಟೇರ್ ಪ್ರದೇಶಕ್ಕೆ ರೂ. 279.98 ಲಕ್ಷ ವಿನಿಯೋಗಿಸಿ 3279 ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ.<br>**4.** ಕೋಲಾರ ಜಿಲ್ಲೆಯ ಮುಳಬಾಗಿಲು ಹಾಗೂ ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನಲ್ಲಿ 3 ತೆಂಗು ನ್ಯೂಕ್ಲಿಯಸ್ ಬೀಜ ಉತ್ಪಾದನಾ ತಾಕುಗಳ ನಿರ್ಮಾಣಕ್ಕೆ ರೂ. 3.00 ಲಕ್ಷಗಳನ್ನು ಸಹಾಯಧನವಾಗಿ ನೀಡಲಾಗಿದೆ. |
| ಈ) | ಕೇಂದ್ರ ತೆಂಗು ಅಭಿವೃದ್ದಿ ಮಂಡಳಿಯಿಂದ ದೊರೆಯುವ ನೆರವು, ಸೌಲಭ್ಯಗಳು ಹಾಗೂ ಸಹಾಯಧನಗಳ ಕುರಿತು ರಾಜ್ಯದ ತೆಂಗು ಬೆಳೆಗಾರರಿಗೆ ಇಲಾಖೆಯ ವತಿಯಿಂದ ಯಾವ ವಿಧಾನದ ಮೂಲಕ ಅರಿವು ಮತ್ತು ಮಾಹಿತಿಯನ್ನು ನೀಡಲಾಗುತ್ತಿದೆ? | ಕೇಂದ್ರ ತೆಂಗು ಅಭಿವೃದ್ದಿ ಮಂಡಳಿಯಿಂದ ದೊರೆಯುವ ನೆರವು, ಸೌಲಭ್ಯಗಳು ಹಾಗೂ ಸಹಾಯಧನಗಳ ಕುರಿತು ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಗಳಿಂದ ವಿಷಯ ತಜ್ಞರು ಹಾಗೂ ಇಲಾಖಾ ಅಧಿಕಾರಿಗಳೊಂದಿಗೆ ತರಬೇತಿ/ಕಾರ್ಯಗಾರ/ಪ್ರಾತ್ಯಕ್ಷತೆ/ವಿಷಯ ಸಂಕೀರ್ಣ ಕಾರ್ಯಕ್ರಮಗಳನ್ನು ಕೈಗೊಳ್ಳುವುದರ ಜೊತೆಗೆ ಸಾಮೂಹಿಕ ಮಾಧ್ಯಮಗಳ ಮೂಲಕ ಮಾಹಿತಿಯನ್ನು ನೀಡಲಾಗುತ್ತಿದೆ. |

**ಸಂಖ್ಯೆ: HORTI 561 HGM 2025**

**(ಎಸ್. ಎಸ್. ಮಲ್ಲಿಕಾರ್ಜುನ್)**

ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು